**ಕತಾರ್‌ನ ಗೌರವಾನ್ವಿತ ಅಮೀರ್ ಅವರ ಭಾರತ ಭೇಟಿ (ಫೆಬ್ರವರಿ 17-18, 2025)**

ಫೆಬ್ರುವರಿ 15, 2025

ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರ ಆಹ್ವಾನದ ಮೇರೆಗೆ, ಕತಾರ್ ದೇಶದ ಅಮೀರ್ ಗೌರವಾನ್ವಿತ ಶೇಖ್ ತಮೀಮ್ ಬಿನ್ ಹಮದ್ ಅಲ್-ಥಾನಿ 2025 ರ ಫೆಬ್ರುವರಿ 17-18 ರಂದು ಭಾರತಕ್ಕೆ ಅಧಿಕೃತ ಭೇಟಿ ನೀಡಲಿದ್ದಾರೆ. ಸಚಿವರು, ಹಿರಿಯ ಅಧಿಕಾರಿಗಳು ಮತ್ತು ವ್ಯಾಪಾರ ನಿಯೋಗ ಸೇರಿದಂತೆ ಉನ್ನತ ಮಟ್ಟದ ನಿಯೋಗ ಅವರೊಂದಿಗೆ ಭಾರತಕ್ಕೆ ಭೇಟಿ ನೀಡಲಿದೆ. ಇದು ಕತಾರ್‌ನ ಗೌರವಾನ್ವಿತ ಅಮೀರ್ ಅವರ ಎರಡನೇ ಭಾರತ ಭೇಟಿಯಾಗಲಿದೆ. ಈ ಮೊದಲು 2015 ರ ಮಾರ್ಚ್‌ನಲ್ಲಿ ಗೌರವಾನ್ವಿತ ಅಮೀರ್ ಭಾರತಕ್ಕೆ ಭೇಟಿ ನೀಡಿದ್ದರು.

2. 2025 ರ ಫೆಬ್ರುವರಿ 18 ರಂದು ರಾಷ್ಟ್ರಪತಿ ಭವನದ ಮುಂಭಾಗದಲ್ಲಿ ಕತಾರ್‌ನ ಗೌರವಾನ್ವಿತ ಅಮೀರ್ ಅವರಿಗೆ ವಿಧ್ಯುಕ್ತ ಸ್ವಾಗತ ನೀಡಲಾಗುತ್ತದೆ. ತಮ್ಮ ಭೇಟಿಯ ಸಮಯದಲ್ಲಿ, ಗೌರವಾನ್ವಿತ ಅಮೀರ್ ಅವರು ಘನತೆವೆತ್ತ ರಾಷ್ಟ್ರಪತಿ ಶ್ರೀಮತಿ ದ್ರೌಪದಿ ಮುರ್ಮು ಅವರೊಂದಿಗೆ ಸಂವಾದ ನಡೆಸಲಿದ್ದಾರೆ. ಮುರ್ಮು ಅವರು ಅಮೀರ್ ಅವರ ಗೌರವಾರ್ಥ ಔತಣಕೂಟವನ್ನು ಆಯೋಜಿಸಲಿದ್ದಾರೆ. ಗೌರವಾನ್ವಿತ ಅಮೀರ್ ಅವರು ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರೊಂದಿಗೆ ದ್ವಿಪಕ್ಷೀಯ ಸಂಬಂಧಗಳ ವಿವಿಧ ಅಂಶಗಳನ್ನು ಒಳಗೊಂಡಂತೆ ಮಾತುಕತೆ ನಡೆಸಲಿದ್ದಾರೆ.

3. ಭಾರತ ಮತ್ತು ಕತಾರ್ ದೇಶಗಳು ಸ್ನೇಹ, ವಿಶ್ವಾಸ ಮತ್ತು ಪರಸ್ಪರ ಗೌರವದ ಗಾಢ ಐತಿಹಾಸಿಕ ಸಂಬಂಧಗಳನ್ನು ಹೊಂದಿವೆ. ಇತ್ತೀಚಿನ ವರ್ಷಗಳಲ್ಲಿ, ವ್ಯಾಪಾರ, ಹೂಡಿಕೆ, ಇಂಧನ, ತಂತ್ರಜ್ಞಾನ, ಸಂಸ್ಕೃತಿ ಮತ್ತು ಜನರ ನಡುವಿನ ಸಂಬಂಧಗಳು ಸೇರಿದಂತೆ ಎರಡೂ ದೇಶಗಳ ನಡುವಿನ ಸಂಬಂಧಗಳು ಬಲಗೊಳ್ಳುತ್ತಲೇ ಇವೆ. ಕತಾರ್‌ನಲ್ಲಿ ವಾಸಿಸುತ್ತಿರುವ ಭಾರತೀಯ ಸಮುದಾಯವು ಕತಾರ್‌ನ ಅತಿದೊಡ್ಡ ವಲಸಿಗ ಸಮುದಾಯವಾಗಿದೆ, ಮತ್ತು ಕತಾರ್‌ನ ಪ್ರಗತಿ ಮತ್ತು ಅಭಿವೃದ್ಧಿಯಲ್ಲಿ ತನ್ನ ಸಕಾರಾತ್ಮಕ ಕೊಡುಗೆಗಾಗಿ ಪ್ರಶಂಸೆ ಪಡೆದಿದೆ. ಗೌರವಾನ್ವಿತ ಅಮೀರ್ ಅವರ ಭೇಟಿಯು ನಮ್ಮ ಬೆಳೆಯುತ್ತಿರುವ ಬಹುಮುಖ ಪಾಲುದಾರಿಕೆಗೆ ಮತ್ತಷ್ಟು ವೇಗವನ್ನು ನೀಡುತ್ತದೆ.

ನವದೆಹಲಿ

ಫೆಬ್ರುವರಿ 15, 2025